# ಆಹಾ ಸುದ್ದಿ!

★ ಸಸಿತೋಟ



ವ್ಯಾಲೆಂಟೈನ್ ದಿನದಂದು ನಲ್ಲ- ನಲ್ಲೆಯರಿಗೆ ಭೇಟಿ ಮಾಡುವ ಸಂಭ್ರಮವಾದರೆ ಥಾಯ್ಲೆಂಡ್‌ನ ಈ ಎಮ್ಮೆ- ಕೋಣದ ಜೋಡಿಗೆ ಮದುವೆ ಮಾಡಿದ ಸಂತಸ ದಿಬ್ಬಣದವರಲ್ಲಿ ಮೇರೆ ಮೇರಿದೆ. ಅಲ್ಲಿಯ ಆಯುತ್ತಾಯದಲ್ಲಿ ವ್ಯಾಲೆಂಟೈನ್ ಆಚರಣೆ ಸಂದರ್ಭದಲ್ಲಿ ಸುಂದರಿಯಾದ ಎಮ್ಮೆಗೆ, ಅಷ್ಟೇ ಸುಂದರನಾದ ಕೋಣವನ್ನು ಹುಡುಕಿ ಮದುವೆ ಮಾಡುತ್ತಾರಂತೆ. ಈ ಅರೆಂಜ್ಡ್ ಮದುವೆಯ ಉದ್ದೇಶವೇನು ಗೊತ್ತೇ? ಅಷ್ಟೇ ಸುಂದರವಾದ ಕರುವನ್ನು ಪಡೆಯುವುದಂತೆ! ಮುಂದೆ 'ಮಿಸ್ ಬಫೆಲೊ' ಸ್ಪರ್ಧೆ ಏರ್ಪಡಿಸಬಹುದು.

ಸೈಬೀರಿಯಾದ ಮೃಗಾಲಯದಲ್ಲಿರುವ ಎಂಟು ವರ್ಷ ವಯಸ್ಸಿನ ಹೆಣ್ಣು ಚಿಂಪಾಂಜಿ ಆ್ಯಂಫಿಸಾ ಹೇಗೆ ನಿಯತಕಾಲಿಕ ನೋಡುವುದರಲ್ಲಿ ತಲ್ಲೀನವಾಗಿದೆ ನೋಡಿ. ಸಂಗಾತಿ ಚಿಂಪಾಂಜಿ ತಿಕೋನ್ ಮರದ ಮೇಲೆ ಜಿಗಿದಾಡುತ್ತ ಕಣ್ಣು ತಂಪು ಮಾಡಿಕೊಳ್ಳಲು ಹೊರಟರೆ, ಪಾಪ ಇದು ಒಂಟಿಯಾಗಿ ಕುಳಿತು ಬೇಸರ ಕಳೆಯಲು ಇನ್ನೇನು ಮಾಡಬೇಕು?



ಅಮೆರಿಕಾದ ಯೇಟ್ಸ್ ಕೌಂಟಿಯ ಜೈಲೊಂದರಲ್ಲಿ ಕೆಲವು ಕೈದಿಗಳು ಮಾದಕ ದ್ರವ್ಯ ಸೇವಿಸಿ ಮೈ ಮರೆಯುತ್ತಿದ್ದರು. ಎಲ್ಲಿಂದ ಬರುತ್ತದೆ ಈ ಮಾದಕ ದ್ರವ್ಯ ಎಂದು ಅಧಿಕಾರಿಗಳು ತಲೆ ಕೆಡಿಸಿಕೊಂಡಿದ್ದೇ ಬಂತು. ದಿನಾ ಮಗನನ್ನು ಭೇಟಿ ಮಾಡಿ ವಿದಾಯದ ಮುತ್ತು ಒತ್ತುತ್ತಿದ್ದ ಮಹಿಳೆಯೊಬ್ಬಳ ಬಾಯಿ ಬಿಡಿಸಿದಾಗ ಬಾಯಲ್ಲೇ ಅಡಗಿತ್ತು ಮಾದಕ ದ್ರವ್ಯದ ಸಾಗಾಟದ ರಹಸ್ಯ. ಇನ್ನು ಮೇಲೆ ಯಾರೂ ಕೈದಿಗಳ ಬಾಯಿಗೆ ಮುತ್ತು ಕೊಡುವ ಹಾಗಿಲ್ಲ ಎಂಬ ಕಾನೂನು ಮಾಡಲು ಅಧಿಕಾರಿಗಳು ತಲೆ ಕೆಡಿಸಿಕೊಳ್ಳುತ್ತಿರಬಹುದು.

ಆಸ್ಟ್ರಿಯಾದ ಡಾ.ಹ್ಯಾನ್ಸ್ ಪೀಟರ್ ಭ್ರಷ್ಟಾಚಾರದಲ್ಲಿ ಭಾರತಕ್ಕೆ ಪೈಪೋಟಿ ನೀಡುವಂತಿದೆ. ಯೂರೋಪಿಯನ್ ಪಾರ್ಲಿಮೆಂಟ್‌ನ ಸದಸ್ಯನಾದ ಈತ ಖರ್ಚಿನ ಮರು ಪಾವತಿಗೆ ಸಲ್ಲಿಸಿದ 13 ಲಕ್ಷ ಯೂರೋ ಮೊತ್ತದ ಬಿಲ್‌ನಲ್ಲಿ ಒಂದು ಖರ್ಚಿನ ಮುಂದೆ 'ಎಲಿಫೆಂಟ್' ಎಂದು ನಮೂದಿಸಿದ್ದಾನಂತೆ. ಈ ಭೂಪ ಆನೆಯ ಮೇಲೆ ಇಷ್ಟೊಂದು ಹಣವನ್ನು ಯಾಕೆ ಖರ್ಚು ಮಾಡಿದ ಎಂದು ಆಸ್ಟ್ರಿಯಾದ ಅಧಿಕಾರಿಗಳು ತಲೆ ಕೆಡಿಸಿಕೊಳ್ಳುತ್ತಿದ್ದಾರಂತೆ. ಆನೆ ಇದ್ದರೂ ಖರ್ಚು, ಸತ್ತರೂ ಖರ್ಚು ಎಂದು ಪೀಟರ್ ಆರಾಮವಾಗಿ ಓಡಾಡಿಕೊಂಡಿದ್ದಾನಂತೆ.



ಮುಂಬೈ ಸಮೀಪದ ಕೊಲಾಡ್‌ನಲ್ಲಿ 'ಮಡ್ ರಷ್'ನ ಮಜಾ. ಏಳು ಕಿ.ಮೀ. ದೂರ ಕೆಸರುಗದ್ದೆ, ಮುಳ್ಳು ತಂತಿಯ ಬೇಲಿ, ಹಳ್ಳ, ಬೆಂಕಿ ಎಂದೆಲ್ಲ ದಾಟಿಕೊಂಡು ಸಾಗುವ ಸ್ಪರ್ಧೆ. ಏಷ್ಯಾದಲ್ಲೇ ಈ ರೀತಿಯ ಸ್ಪರ್ಧೆ ಪ್ರಥಮ ಎಂಬ ಹೆಗ್ಗಳಿಕೆ ಸಂಘಟಕರದ್ದು. ಜಾಗತೀಕರಣ ಎಂದ ಮೇಲೆ ಇಂಥವೆಲ್ಲ ಭಾರತಕ್ಕೆ ಬರಲೇಬೇಕಲ್ಲವೇ?



ಸ್ವೀಡನ್‌ನಲ್ಲಿ ಉಷ್ಣಾಂಶ -28 ಡಿ.ಸೆ.ಗೆ ಇಳಿದಿದೆಯಂತೆ. ಆ ಚಳಿಯಲ್ಲಿ, ಈ ಹಿಮಗಡ್ಡೆಯ ಮೇಲೆ ಕುಳಿತುಕೊಳ್ಳುವ ಹುಚ್ಚು ಯಾಕೋ ಎಂದು ಬೆಂಗಳೂರಲ್ಲೇ ಕುಳಿತು ನಡುಗಿದರೆ.. ಹೇಗೆ? ಆದರೆ ಆ ಆರು ಮಂದಿ 48 ಗಂಟೆಗಳ ಕಾಲ ಹಿಮದ ಮೇಲೆ ಪೃಷ್ಠವನ್ನೂರಿ 3,100 ಡಾಲರ್ ಗೆದ್ದರಂತೆ. ಚಳಿಗೆ ಹೆದರಿಲ್ಲ, 48 ಗಂಟೆಗಳ ಏಕತಾನತೆಯೇ ಹೆಚ್ಚು ಹೆದರಿಸಿತು ಎಂದರಂತೆ ಗೆದ್ದವರು!